## 2018 ಕ.ತೀ.ವ 75

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

### ಕುಮಾರ್ ಎ.ಎಸ್. ಮತ್ತು ಇತರರು –ವಿರುದ್ಧ– ವ್ಯವಸ್ಥಾಪಕರು, ಮೆ॥ ಶ್ರೀ ಶ್ಯಾಮ್ ಗ್ಯಾಸ್ ಹೌಸ್ ಮತ್ತು ಇನ್ನೊಬ್ಬರು

ಮೋಟಾರು ವಾಹನ ಅಧಿನಿಯಮ, 1988ರ 173(1)ರ ಪ್ರಕರಣದಡಿಯಲ್ಲಿನ ಸಂಕೀರ್ಣ ಮೊದಲ ಅಪೀಲು.

ಮೊದಲನೇ ಅಪೀಲುದಾರನಿಗೆ ಸೇರಿರುವ ಮಾರುತಿ ಓಮಿನಿ ಮತ್ತು ಎರಡನೇ ಪ್ರತ್ಯರ್ಜಿದಾರನೊಂದಿಗೆ ವಿಮೆ ಮಾಡಲಾಗಿರುವ ಮೊದಲನೇ ಪ್ರತ್ಯರ್ಜಿದಾರನಿಗೆ ಸೇರಿರುವ ಕ್ಯಾಂಟರ್ ಸರಕುಗಳ ವಾಹನಗಳಿಂದಾಗಿ, ದಿನಾಂಕ 02.01.2008 ರಂದು ನಡೆದ ರಸ್ತೆ ಸಂಚಾರ ಅಪಘಾತದಲ್ಲಿ ಮೃತರಾದ, ಮೊದಲನೇ ಅಪೀಲುದಾರನ ಪತ್ನಿ ಮತ್ತು 2 ಹಾಗೂ 3ನೇ ಅಪೀಲುದಾರರ ತಾಯಿಯ ಮರಣದಿಂದಾಗಿ ಕ್ಲೇಮುದಾರರು ಎಂವಿಸಿ ಸಂ.466/2008ರಲ್ಲಿ, ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಹಾಸನ ಇವರು ನೀಡಿದ ತೀರ್ಪನ್ನು ಪ್ರಶ್ನಿಸಿ ಪರಿಹಾರ ಹೆಚ್ಚಳಕ್ಕೆ ಕೋರಿ ಈ ಅಪೀಲನ್ನು ಸಲ್ಲಿಸಿದ್ದಾರೆ.

ಮೃತ ಪ್ರಮಿಳಾರ ತರುವಾಯ, ಕುಟುಂಬದ ನಿರ್ವಹಣೆಯು, ಮೊದಲನೇ ಅಪೀಲುದಾರನಾದ, ಸಾಕ್ಷಿದಾರನ ಮೇಲಿದೆ ಎಂದು ಕಂಡು ಬರುತ್ತದೆ ಮತ್ತು ಮೃತಳು ಆಕೆಯ ಗಳಿಕೆಯನ್ನು ಮುಖ್ಯ ಕೊಡುಗೆಯಾಗಿ ಕುಟುಂಬದ ಕಲ್ಯಾಣಕ್ಕೆ ನೀಡುತ್ತಿದ್ದಳು ಎಂದು ಸಹ ಹೇಳಲಾಗಿದೆ. ಆಕೆಯ ಮರಣದ ತರುವಾಯ, ಕುಟುಂಬದ ಹಣಕಾಸಿನ ಸ್ಥಿತಿಯು ಬಾಧಿತವಾಗಿದೆ. ಈ ಎಲ್ಲಾ ಸಂಚಿತ ಕಾರಣಗಳ ಪರಿಣಾಮವಾಗಿ ಮೊದಲನೇ ಕ್ಲೇಮುದಾರನು ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣದ ಮುಂದೆ ತನ್ನ ಕ್ಲೇಮು ಅರ್ಜಿಯ ಹಂತಗಳನ್ನು ಪರಿಶೀಲಿಸುವ ಸ್ಥಿತಿಯಲ್ಲಿ ಇರಲಿಲ್ಲವೆಂದಿದ್ದಾರೆ. ಇತ್ತೀಚೆಗೆ ಮಾತ್ರ ಅಂದರೆ, ತನ್ನ ನ್ಯಾಯವಾದಿಯ ಸಂಪರ್ಕದಲ್ಲಿರುವಾಗ ಈ ಅಪೀಲನ್ನು ದಾಖಲು ಮಾಡುವ ಮುಂಚೆ, ಪರಿಹಾರ ನೀಡಲಾಗಿರುವುದು ಅತ್ಯಂತ

*ಸಂಕೀರ್ಣ ಮೊದಲ ಅಪೀಲು ಸಂಖ್ಯೆ: 942/2012 (ಎಂವಿ), ದಿನಾಂಕ: 23ನೇ ಸೆಪ್ಟೆಂಬರ್, 2015.

ಕಡಿಮೆಯಿದೆಯೆಂದು ತಿಳಿಸಲಾಗಿದೆ. ಹಾಗಾಗಿ, ಪರಿಹಾರದ ಹೆಚ್ಚಳಕ್ಕೆ ಕೋರಿ ಅಪೀಲನ್ನು ದಾಖಲು ಮಾಡುವುದು ಅಗತ್ಯವೆಂದು ತಿಳಿಸಲಾಗಿದೆ. ಅದಕ್ಕನುಸಾರವಾಗಿ, ಈ ಅಪೀಲನ್ನು, 543 ದಿನಗಳ ಮಿತಿಮೀರಿದ ವಿಳಂಬದೊಂದಿಗೆ ದಾಖಲು ಮಾಡಲಾಗಿದೆ.

ಈ ನ್ಯಾಯಾಲಯ ಇಡಿ ದಾಖಲೆಯನ್ನು ಪರಿಶೀಲಿಸಿದಾಗ ಸ್ವತಃ ಕ್ಲೇಮು ಅರ್ಜಿಯ ಇಡೀ ಆಧಾರವು, ಸುಳ್ಳೆಂದು ಕಂಡು ಬಂದಿದೆ. ಪೊಲೀಸ್ ದಾಖಲೆಗಳು, ಅಪಘಾತದ ಸಮಯದಲ್ಲಿ ಸೂಚಿಸಿದಂತೆ, ಮೃತಳು, ಗೃಹಣಿಯಾಗಿದ್ದಳು ಮತ್ತು ಆಕೆಯು, ಲಾಭದಾಯಕ ಹುದ್ದೆಯಲ್ಲಿರುವಂತೆ ನಮೂದಿಸಿರುವುದಿಲ್ಲ ಎಂಬುದನ್ನು ಪೊಲೀಸರು ತಿಳಿಸಿದ್ದಾರೆ. ಆದಾಗ್ಯೂ, ಎಲ್ಲಾ ವಿಷಯವನ್ನು ಕ್ಲೇಮು ಅರ್ಜಿಯಲ್ಲಿ, ಆಕೆಯು ಉದ್ಯೋಗಿಯಾಗಿದ್ದಳು ಮತ್ತು ಮಾಸಿಕ 6,000/- ರೂಪಾಯಿಗಳ ಮೊತ್ತವನ್ನು ಗಳಿಸುತ್ತಿದ್ದಳು ಎಂಬುದನ್ನು ತೋರಿಸುವ ರೀತಿಯಲ್ಲಿ ಉಪಯೋಗಿಸಿಕೊಳ್ಳಲಾಗಿದೆ.

ಪ್ರಸಕ್ತ ಪ್ರಕರಣದಲ್ಲಿ, ಹೆಚ್ಚಿನ ಮೊತ್ತದ ಕ್ಲೇಮು ಪರಿಹಾರಕ್ಕೆ ಕ್ಲೇಮುದಾರರು ವಂಚಕ ಕಾರ್ಯವಿಧಾನವನ್ನು ಅಳವಡಿಸಿಕೊಂಡಿದ್ದಾರೆ ಮತ್ತು ಕ್ಲೇಮುದಾರರು, 5,18,400/- ರೂಪಾಯಿಗಳ 'ಅವಲಂಬನಾ ನಷ್ಟಕ್ಕಾಗಿ'ನ ಶೀರ್ಷಿಕೆಯಡಿಯಲ್ಲಿ ನ್ಯಾಯಾಧಿಕರಣದಿಂದ ಪರಿಹಾರ ಪಡೆದುಕೊಳ್ಳಲು ಇಷ್ಟೆಲ್ಲವನ್ನು ಮಾಡಿದ್ದಾರೆ. ಇದು ನ್ಯಾಯಸಮ್ಮತ ಮತ್ತು ಯುಕ್ತತೆಗಿಂತ ಹೆಚ್ಚಾಗಿರುವುದು ಕಂಡು ಬರುತ್ತದೆ.

ವಿಷಯದ ಈ ಹಿನ್ನೆಲೆಯಲ್ಲಿ, ವಿಳಂಬವನ್ನು ಮನ್ನಿಸುವುದಕ್ಕೆ ಕಾರಣಗಳಿರುವುದಿಲ್ಲವೆಂದು ಈ ನ್ಯಾಯಾಲಯ ಭಾವಿಸಿದೆ. ಹಾಗಾಗಿ ವಿಳಂಬದ ಮನ್ನಿಸುವಿಕೆಗಾಗಿನ ಅರ್ಜಿಯನ್ನು ಪರಿಗಣಿಸುವ ಪ್ರಶ್ನೆ, ಉದ್ಭವಾಗುವುದಿಲ್ಲ. ಅದಕ್ಕನುಸಾರವಾಗಿ ಐ.ಎ. ಸಂಖ್ಯೆ.1/2012 ಅರ್ಜಿಯನ್ನು ವಜಾಗೊಳಿಸಲಾಗಿದೆ. ಹಾಗೆ ಮಾಡಿರುವಾಗ, ಅರ್ಜಿಯನ್ನು ಅಂಗೀಕರಿಸಿದರೂ ಸಹ, ಪರಿಹಾರದ ಹೆಚ್ಚಳಕ್ಕೆ ಯಾವುದೇ ಕಾರಣವಿರುವುದಿಲ್ಲವೆಂದು ಸಹ ಅಭಿಪ್ರಾಯಪಟ್ಟಿದೆ.

ಆದ್ದರಿಂದ, ಈ ಅಪೀಲನ್ನು ವಜಾಗೊಳಿಸಲಾಗಿದೆ.

ಹಾಗೆಯೇ ಇಂತಹ ಸುಳ್ಳು ಕ್ಲೇಮುಗಳನ್ನು ಮಾಡುವ ಹಾಗೂ ಇದನ್ನು ಸಮರ್ಥಿಸಲು ಸುಳ್ಳು ಸಾಕ್ಷ್ಯ ನೀಡುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ಸಹಾ ಸದರಿ ತೀರ್ಪಿನಲ್ಲಿ ನಿರ್ದೇಶಿಸಲಾಗಿದೆ.

ಅಪೀಲುದಾರರ ಪರ: ಶ್ರೀ ಚೇತನ್ .ಬಿ – ವಕೀಲರು;
1ನೇ ಪ್ರತ್ಯರ್ಜಿದಾರನಿಗೆ ದಿನಾಂಕ 21.08.2015ರ ನ್ಯಾಯಾಲಯದ ಆದೇಶದ ಮೂಲಕ ನೋಟೀಸ್ ನೀಡುವುದರಿಂದ ವಿನಾಯಿತಿ ನೀಡಲಾಗಿದೆ.
2ನೇ ಪ್ರತ್ಯರ್ಜಿದಾರರ ಪರ: ಶ್ರೀ ಕೆ.ಎನ್. ಶ್ರೀನಿವಾಸ–ವಕೀಲರು.

## ತೀರ್ಪು

**ನ್ಯಾಯಮೂರ್ತಿ ಎಸ್.ಎನ್. ಸತ್ಯನಾರಾಯಣ:**

ಮೊದಲನೇ ಅಪೀಲುದಾರನಿಗೆ ಸೇರಿರುವ ಮಾರುತಿ ಓಮಿನಿ ಮತ್ತು ಎರಡನೇ ಪ್ರತ್ಯರ್ಜಿದಾರನೊಂದಿಗೆ ವಿಮೆ ಮಾಡಲಾಗಿರುವ ಮೊದಲನೇ ಪ್ರತ್ಯರ್ಜಿದಾರನಿಗೆ ಸೇರಿರುವ ಕ್ಯಾಂಟರ್ ಸರಕುಗಳ ವಾಹನಗಳಿಂದಾಗಿ, ದಿನಾಂಕ 02.01.2008 ರಂದು ನಡೆದ ರಸ್ತೆ ಸಂಚಾರ ಅಪಘಾತದಲ್ಲಿ ಮೃತರಾದ, ಮೊದಲನೇ ಅಪೀಲುದಾರನ ಪತ್ನಿ ಮತ್ತು 2 ಹಾಗೂ 3ನೇ ಅಪೀಲುದಾರರ ತಾಯಿಯ ಮರಣದಿಂದಾಗಿ ಕ್ಲೇಮುದಾರರು ಎಂವಿಸಿ ಸಂ.466/2008ರಲ್ಲಿ, ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧೀಕರಣ ಹಾಸನ ಇವರು ನೀಡಿದ ತೀರ್ಪನ್ನು ಪ್ರಶ್ನಿಸಿ ಪರಿಹಾರ ಹೆಚ್ಚಳಕ್ಕೆ ಕೋರಿ ಈ ಅಪೀಲನ್ನು ಸಲ್ಲಿಸಿದ್ದಾರೆ. ದಿನಾಂಕ 02.01.2008 ರಂದು ನಡೆದ ಅಪಘಾತವು ವಿವಾದಿತವಲ್ಲ. ನೋಂದಣಿ ಸಂ. ಕೆಎ–03/ಎಂಬಿ–7715 ಹೊಂದಿದ ಮಾರುತಿ ಓಮಿನಿಯಲ್ಲಿ ಪ್ರಯಾಣಿಸುತ್ತಿದ್ದ ಪ್ರಮೀಳಾ ಮರಣವು ಸಹಾ ವಿವಾದಿತವಲ್ಲ. ಮುಂದುವರೆದು, ಕೆಎ–52/2252 ಸಂಖ್ಯೆಯನ್ನು ಹೊಂದಿದ್ದ ಕ್ಯಾಂಟರ್ ಸರಕುಗಳ ವಾಹನದ ಚಾಲಕನ ದುಡಕಿನ ಮತ್ತು ನಿರ್ಲಕ್ಷ್ಯತೆಯ ಕಾರಣದಿಂದಾಗಿ, ಅಪಘಾತ ಉಂಟಾಗಿದೆಯೆಂಬುದು ವಿವಾದಿತಲ್ಲ. ನ್ಯಾಯಾಧಿಕರಣದ ಮುಂದಿನ ವ್ಯವಹರಣೆಗಳಲ್ಲಿ, ಕ್ಲೇಮುದಾರರು, ಮೃತ ಪ್ರಮೀಳಾಗೆ ಸುಮಾರು 29 ವರ್ಷಗಳ ವಯಸ್ಸಾಗಿದ್ದು, ಕಂಪ್ಯೂಟರ್ ಆಪರೇಟರ್ ಆಗಿದ್ದಳು ಮತ್ತು ನಿಶಾನೆ ಪಿ.8ರ ಪ್ರಕಾರ ಮಾಸಿಕ 6,000/– ರೂ.ಗಳ ಮೊತ್ತವನ್ನು ಗಳಿಸುತ್ತಿದ್ದಳು ಹಾಗಾಗಿ 20,00,000/– ರೂಪಾಯಿಗಳ ಮೊತ್ತದ ಪರಿಹಾರ ನೀಡಬೇಕೆಂದು ಕೋರಿದ್ದಾರೆ. ಸದರಿ ವ್ಯವಹರಣೆಗಳಲ್ಲಿ ಕ್ಲೇಮುದಾರರ ಪರವಾಗಿ, ಮೃತರ ಪತಿಯು

ನೀಡಿದ ಸಾಕ್ಷ್ಯವನ್ನು ಪ್ರಾಸಾ.1 ಆಗಿ ಮತ್ತು ನಿಶಾನೆ ಪಿ.8ನ್ನು ನೀಡಿರುವ ಕರ್ತೃವನ್ನು ಪ್ರಾ.ಸಾ.2 ಆಗಿ ಪರೀಕ್ಷಿಸಲಾಗಿದೆ. ಮೃತ ಪ್ರಮಿಳಾರ ಉದ್ಯೋಗವನ್ನು ಅಂಗೀಕರಿಸಿ ಪ್ರಾ.ಸಾ.2ರ ಸಾಕ್ಷ್ಯವನ್ನು ನ್ಯಾಯಾಲಯ ಪರಿಗಣಿಸಿದೆ ಮತ್ತು 5,58,400/– ರೂಪಾಯಿಗಳ ಮೊತ್ತವನ್ನು ಕ್ಲೇಮುದಾರರಿಗೆ ಪರಿಹಾರವಾಗಿ ನೀಡಲಾಗಿದೆ. ಪರಿಹಾರದ ಮೊತ್ತದಿಂದ ಬಾಧಿತಗೊಂಡ ಅಪೀಲುದಾರರು, 543 ದಿನಗಳ ಮಿತಿಮೀರಿದ ವಿಳಂಬವನ್ನು ಮನ್ನಿಸುವಂತೆ ಕೋರಿ ಐ.ಎ.ಸಂಖ್ಯೆ. 1/2012ರಲ್ಲಿ ಅರ್ಜಿಯೊಂದಿಗೆ ಈ ಅಪೀಲನ್ನು ದಾಖಲು ಮಾಡಿದ್ದಾರೆ.

2. ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯ ಅಹವಾಲನ್ನು ಆಲಿಸಲಾಗಿದೆ ಮತ್ತು ಅದಕ್ಕೆ ಪೂರಕವಾಗಿ ದಾಖಲು ಮಾಡಿದ ಇಡೀ ಶಪಥ ಪತ್ರವನ್ನು ಪರಿಶೀಲಿಸಲಾಗಿದೆ. ಶಪಥ ಪತ್ರವನ್ನು ಪರಿಶೀಲಿಸಿದ ಮೇಲೆ, ಮೃತ ಪ್ರಮಿಳಾರ ತರುವಾಯ, ಕುಟುಂಬದ ನಿರ್ವಹಣೆಯು, ಮೊದಲನೇ ಅಪೀಲುದಾರನಾದ, ಸಾಕ್ಷಿದಾರ – ಕುಮಾರ್ ಎ.ಎಸ್.ನ ಮೇಲಿದೆ ಎಂದು ಕಂಡು ಬರುತ್ತದೆ ಮತ್ತು ಮೃತಳು ಆಕೆಯ ಗಳಿಕೆಯನ್ನು ಮುಖ್ಯ ಕೊಡುಗೆಯಾಗಿ ಕುಟುಂಬದ ಕಲ್ಯಾಣಕ್ಕೆ ನೀಡುತ್ತಿದ್ದಳು ಎಂದು ಸಹ ಹೇಳಲಾಗಿದೆ. ಆಕೆಯ ಮರಣದ ತರುವಾಯ, ಕುಟುಂಬದ ಹಣಕಾಸಿನ ಸ್ಥಿತಿಯು ಬಾಧಿತವಾಗಿದೆ. ಈ ಎಲ್ಲದರ ಸಂಚಿತ ಕಾರಣಗಳ ಪರಿಣಾಮವಾಗಿ ಮೊದಲನೇ ಕ್ಲೇಮುದಾರನು, ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣದ ಮುಂದೆ ತನ್ನ ಕ್ಲೇಮು ಅರ್ಜಿಯ ಹಂತಗಳನ್ನು ಪರಿಶೀಲಿಸುವ ಸ್ಥಿತಿಯಲ್ಲಿ ಇರಲಿಲ್ಲವೆಂದಿದ್ದಾರೆ. ಇತ್ತೀಚೆಗೆ ಅಂದರೆ, ತನ್ನ ನ್ಯಾಯವಾದಿಯ ಸಂಪರ್ಕದಲ್ಲಿರುವಾಗ ಈ ಅಪೀಲನ್ನು ದಾಖಲು ಮಾಡುವ ಮುಂಚೆ, ಪರಿಹಾರ ನೀಡಲಾಗಿರುವುದು ಅತ್ಯಂತ ಕಡಿಮೆಯಿದೆಯೆಂದು ತಿಳಿಸಲಾಗಿದೆ. ಹಾಗಾಗಿ, ಪರಿಹಾರದ ಹೆಚ್ಚಳಕ್ಕೆ ಕೋರಿ ಅಪೀಲನ್ನು ದಾಖಲು ಮಾಡುವುದು ಅಗತ್ಯವೆಂದು ತಿಳಿಸಲಾಗಿದೆ. ಅದಕ್ಕನುಸಾರವಾಗಿ, ಈ ಅಪೀಲನ್ನು, 543 ದಿನಗಳ ಮಿತಿಮೀರಿದ ವಿಳಂಬದೊಂದಿಗೆ ದಾಖಲು ಮಾಡಲಾಗಿದೆ.

3. ಶಪಥ ಪತ್ರದಲ್ಲಿ ಹೇಳಲಾದ ಕಾರಣಗಳನ್ನು ಅಂಗೀಕರಿಸಲಾಗದಿದ್ದರೂ, ಮೇಲೆ ಚರ್ಚಿಸಲಾದಂತೆ ವಾದ ಪತ್ರಗಳು ಮತ್ತು ಸಾಕ್ಷ್ಯವನ್ನು ಪರಿಶೀಲಿಸಿದ ಮೇಲೆ, ಮೃತ ಪ್ರಮೀಳಾ, ಕಂಪ್ಯೂಟರ್ ಆಪರೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಳು ಎಂಬ ಆಧಾರದ ಮೇಲೆ ಕ್ಲೇಮುದಾರರು ಪರಿಹಾರವನ್ನು ಕೋರಿದ್ದಾರೆ ಎಂಬುದನ್ನು ನೋಡಬಹುದಾಗಿದೆ. ಅದಕ್ಕನುಸಾರವಾಗಿ, ಕ್ಲೇಮುದಾರರ ಕುಟುಂಬಕ್ಕೆ ಗಣನೀಯ ಆದಾಯ ನಷ್ಟವಾಗಿದೆ. ಕ್ಲೇಮು ಅರ್ಜಿಯಲ್ಲಿನ ದೃಢೋಕ್ತಿಗಳನ್ನು ಹಾಗೂ ಪ್ರಾ.ಸಾ.2 ಮತ್ತು ನಿಶಾನೆ ಪಿ.8ರ ಸಾಕ್ಷ್ಯವನ್ನು ನಂಬಿದ ನ್ಯಾಯಾಧಿಕರಣವು ಅವಲಂಬನ ನಷ್ಟದ ಸಲುವಾಗಿ 5,18,400/– ರೂಪಾಯಿಗಳ ಮೊತ್ತದಂತೆ ಕ್ಲೇಮುದಾರರಿಗೆ ಗಣನೀಯ ಪರಿಹಾರವನ್ನು ನೀಡಿದೆ.

4. ಈ ನ್ಯಾಯಾಲಯ ಇಡೀ ದಾಖಲೆಯನ್ನು ಪರಿಶೀಲಿಸಿದಾಗ, ಸ್ವತಃ ಕ್ಲೇಮು ಅರ್ಜಿಯ ಇಡೀ ಆಧಾರವು ಸುಳ್ಳೆಂದು ಕಂಡು ಬಂದಿದೆ. ಪೊಲೀಸ್ ದಾಖಲೆಗಳು, ಅಪಘಾತದ ಸಮಯದಲ್ಲಿ ದೃಢಪಡಿಸುವಂತೆ ಮೃತಳು ಗೃಹಣಿಯಾಗಿದ್ದಳು, ಆಕೆಯು ಲಾಭದಾಯಕ ಹುದ್ದೆಯಲ್ಲಿದ್ದಳೆಂದು ಎಲ್ಲಿಯೂ ನಮೂದಿಸಿರುವುದಿಲ್ಲ ಎಂಬುದನ್ನು ತಿಳಿಸುತ್ತವೆ. ಆದಾಗ್ಯೂ, ಕ್ಲೇಮು ಅರ್ಜಿಯಲ್ಲಿ, ಎಲ್ಲಾ ವಿಷಯಗಳು ಆಕೆಯು ಉದ್ಯೋಗಿಯಾಗಿದ್ದಳು ಮತ್ತು ಮಾಸಿಕ 6,000/– ರೂಪಾಯಿಗಳ ಮೊತ್ತವನ್ನು ಗಳಿಸುತ್ತಿದ್ದಳು ಎಂಬುದನ್ನು ತೋರಿಸುವ ರೀತಿಯಲ್ಲಿ ಉಪಯೋಗಿಸಿಕೊಳ್ಳಲಾಗಿದೆ. ಮೃತ ಪ್ರಮೀಳಾ, ಆ ಪ್ರಸಕ್ತ ಸಮಯದಲ್ಲಿ ಲಾಭದಾಯಕ ಹುದ್ದೆಯಲ್ಲಿರುವುದಿಲ್ಲವೆಂದು ಭಾವಿಸಿದರೂ, ಈ ನ್ಯಾಯಾಲಯ, ಆಕೆಯು, ಹಣವನ್ನು ಗಳಿಸುತ್ತಿದ್ದಂತೆ ಊಹಾತ್ಮಕ ಆದಾಯವನ್ನು ತೆಗೆದುಕೊಳ್ಳುತ್ತದೆ ಮತ್ತು ನ್ಯಾಯಸಮ್ಮತ ಹಾಗೂ ಯುಕ್ತ ಪರಿಹಾರ ನೀಡುತ್ತದೆ. ಈ ಕಾರಣಕ್ಕಾಗಿ ಕ್ಲೇಮುದಾರರು ವಂಚಕ ಕಾರ್ಯದ ಈ ವಿಧಾನವನ್ನು ಅಳವಡಿಸಿಕೊಳ್ಳುವ ಅಗತ್ಯವಿರುವುದಿಲ್ಲ.

5. ಪ್ರಸಕ್ತ ಪ್ರಕರಣದಲ್ಲಿ, ಹೆಚ್ಚಿನ ಮೊತ್ತದ ಕ್ಲೇಮು ಪರಿಹಾರಕ್ಕೆ ಕ್ಲೇಮುದಾರರು ವಂಚಕ ಕಾರ್ಯವಿಧಾನವನ್ನು ಅಳವಡಿಸಿಕೊಂಡಿದ್ದಾರೆ ಮತ್ತು ಕ್ಲೇಮುದಾರರು,

5,18,400/- ರೂಪಾಯಿಗಳ ‘ಅವಲಂಬನಾ ನಷ್ಟ’ದ ಸಲುವಾಗಿ ನ್ಯಾಯಾಧಿಕರಣದಿಂದ ಪರಿಹಾರ ಪಡೆದುಕೊಳ್ಳಲು ಇಷ್ಟೆಲ್ಲವನ್ನು ಮಾಡಿದ್ದಾರೆ. ಇದು ನ್ಯಾಯಸಮ್ಮತ ಮತ್ತು ಯುಕ್ತತೆಗಿಂತ ಹೆಚ್ಚಾಗಿರುವುದು ಕಂಡು ಬರುತ್ತದೆ.

6. ಈ ವಿಷಯದ ಹಿನ್ನೆಲೆಯಲ್ಲಿ, ವಿಳಂಬವನ್ನು ಮನ್ನಿಸುವುದಕ್ಕೆ ಕಾರಣಗಳಿರುವುದಿಲ್ಲವೆಂದು ಈ ನ್ಯಾಯಾಲಯ ಭಾವಿಸಿದೆ. ಹಾಗಾಗಿ ವಿಳಂಬದ ಮನ್ನಿಸುವಿಕೆಗಾಗಿನ ಅರ್ಜಿಯನ್ನು ಪರಿಗಣಿಸುವ ಪ್ರಶ್ನೆ ಉದ್ಭವಾಗುವುದಿಲ್ಲ. ಅದಕ್ಕನುಸಾರವಾಗಿ ಐ.ಎ. ಸಂಖ್ಯೆ.1/2012 ಅರ್ಜಿಯನ್ನು ವಜಾಗೊಳಿಸಲಾಗಿದೆ. ಹಾಗೆ ಮಾಡಿರುವಾಗ, ಈ ಅರ್ಜಿಯನ್ನು ಅಂಗೀಕರಿಸಿದರೂ ಸಹ, ಪರಿಹಾರದ ಹೆಚ್ಚಳಕ್ಕೆ ಯಾವುದೇ ಕಾರಣವಿರುವುದಿಲ್ಲವೆಂದು ಸಹ ಅಭಿಪ್ರಾಯಪಟ್ಟಿದೆ. ಆದ್ದರಿಂದ, ಈ ಅಪೀಲನ್ನು ಸಹ, ವಜಾಗೊಳಿಸಲಾಗಿದೆ.

7. ವಿಷಯ ಹೀಗಿರುವಾಗ, ಮೋಸದ ಕ್ಲೇಮುಗಳನ್ನು ದಾಖಲು ಮಾಡುತ್ತಿರುವ ಸಂಖ್ಯೆ ಹೆಚ್ಚಾಗುತ್ತಿದೆಯೆಂದು ಈ ನ್ಯಾಯಾಲಯ, ಅಭಿಪ್ರಾಯಪಟ್ಟಿದೆ. ಈ ವ್ಯವಹರಣೆಗಳಲ್ಲಿ ಪ್ರಾ.ಸಾ.2 ಈ ವ್ಯವಹರಣೆಗಳೊಂದಿಗೆ ಯಾವುದೇ ಸಂಬಂಧವಿಲ್ಲದಿದ್ದರೂ, ಮೃತ ಪ್ರಮೀಳಾ, ಅಪಘಾತದ ದಿನಾಂಕಕ್ಕೆ ಮುಂಚೆ ಎರಡು ವರ್ಷಗಳಿಗಿಂತ ಹೆಚ್ಚಾಗಿ ತನ್ನ ಹಂಚಿಕೆ ಫರ್ಮ್‌ನಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಳೆಂದು ತಪ್ಪು ಸಾಕ್ಷ್ಯವನ್ನು ನೀಡಿದುದಲ್ಲದೆ ಪ್ರಾ.ಸಾ.2 ಆದ ಆತನು ಸಾಕ್ಷಿಕಟ್ಟೆಯಲ್ಲಿ ನಿಂತುಕೊಳ್ಳುವುದರ ಜೊತೆಗೆ ನಿಶಾನೆ ಪಿ.8ರಲ್ಲಿ ಸುಳ್ಳು ಪ್ರಮಾಣ ಪತ್ರ ನೀಡಿದ್ದಾನೆ, ಅದನ್ನು ದುರುಪಯೋಗಪಡಿಸಿಕೊಳ್ಳುವ ಮೂಲಕ ನ್ಯಾಯಾಧಿಕರಣದ ಮುಂದೆ ಕ್ಲೇಮುದಾರರು ಅಡ್ಡದಾರಿ ಹಿಡಿದಿದ್ದಾರೆಂದು ಕಂಡು ಬಂದಿದೆ. ವಾಸ್ತವವಾಗಿ, ಕ್ಲೇಮುದಾರರು, ಹಾಗೇ ಸುಳ್ಳು ಪ್ರಮಾಣ ಪತ್ರ ಹಾಜರುಪಡಿಸಿ ಯಶಸ್ವಿಯಾಗಿರುವ ಮತ್ತು ಹೆಚ್ಚು ಪರಿಹಾರ ಪಡೆದುಕೊಂಡಿರುವ ಇದು ಕೇವಲ ಒಂದು ಉದಾಹರಣೆ ಮಾತ್ರವಾಗಿದೆ. ವಿವಿಧ ನೂರಾರು ಅಂಥ ಕ್ಲೇಮು ಅರ್ಜಿಗಳನ್ನು, ಅಂಥ ಸುಳ್ಳು ದಸ್ತಾವೇಜುಗಳ ಆಧಾರದ ಮೇಲೆ ದಾಖಲು ಮಾಡಿದ್ದಾರೆ. ಈ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳಲ್ಲಿ

ನ್ಯಾಯಾಲಯವನ್ನು ತಮಾಷೆಯಾಗಿ ತೆಗೆದುಕೊಳ್ಳುವ ಮೂಲಕ ಅವರು ಸುಳ್ಳು ಪ್ರಮಾಣ ಪತ್ರವನ್ನು ನೀಡುತ್ತಿದ್ದಾರೆ ಹಾಗೂ ನಿರ್ಭೀತಿಯಿಂದ ಸಾಕ್ಷಿಕಟ್ಟೆಯಲ್ಲಿ ನಿಂತುಕೊಳ್ಳುವುದರ ಮೂಲಕ, ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನೀಡುವ ಮೂಲಕ, ಈ ನ್ಯಾಯಾಲಯದಿಂದ ಹೆಚ್ಚು ಪರಿಹಾರ ಪಡೆದುಕೊಳ್ಳಲು ರಸ್ತೆ ಸಂಚಾರ ಅಪಘಾತದಲ್ಲಿ ಮೃತರಾದವರ ಪರ ನ್ಯಾಯ ಸಮ್ಮತವಲ್ಲದ ಕ್ಲೇಮನ್ನು ಮಾಡುತ್ತಿದ್ದಾರೆಂಬುದು ಹಾಗೂ ಈ ನ್ಯಾಯಾಲಯದ ಮುಂದೆ ಸುಳ್ಳು ವ್ಯಾಜ್ಯಗಳನ್ನು ಹೂಡುತ್ತಿರುವವರ ಸಂಖ್ಯೆ ಇಮ್ಮಡಿಸುತ್ತಿರುವುದು ಈ ನ್ಯಾಯಾಲಯಕ್ಕೆ ನೋವುಂಟು ಮಾಡಿದೆ. ಕ್ಲೇಮುದಾರರಿಗೆ ಹೆಚ್ಚು ಪರಿಹಾರ ನೀಡಲು ಈ ಬಗೆಯ ಸುಳ್ಳು ಸಾಕ್ಷ್ಯದ ಸುಲಭ ವಂಚನಾ ಕ್ರಮಗಳನ್ನು ಅಂಗೀಕರಿಸುತ್ತಿರುವುದರಿಂದಾಗಿ ನ್ಯಾಯಾಲಯಗಳ ಮೇಲಿನ ವಿಶ್ವಸನೀಯತೆಯು ಕಡಿಮೆಯಾಗಿದೆ.

8. ಆದ್ದರಿಂದ, ಇದನ್ನು ಅಂತ್ಯಗೊಳಿಸುವುದಕ್ಕೆ, ನಿಯಂತ್ರಿತ ಕ್ರಮಗಳನ್ನು ತೆಗೆದುಕೊಳ್ಳಲು ಅಗತ್ಯಪಡಿಸಲಾಗಿದೆ. ಯಾವುದೋ ಒಂದು ಸಮಯದಲ್ಲಿ ಇದನ್ನು ಪ್ರಾರಂಭಿಸಲು ಇಚ್ಛಿಸಲಾಗಿದೆ ಮತ್ತು ಈ ನ್ಯಾಯಾಲಯ ಇದನ್ನು ಪ್ರಯೋಗಾತ್ಮಕ ಪ್ರಕರಣದಂತೆ ತೆಗೆದುಕೊಳ್ಳಲಾಗಿದೆ. ಕಾನೂನು ನ್ಯಾಯಾಲಯದಲ್ಲಿ, ಸಾಕ್ಷ್ಯವಾಗಿ ಉಪಯೋಗಿಸಿಕೊಳ್ಳಲು ಸುಳ್ಳು ಪ್ರಮಾಣ ಪತ್ರವನ್ನು ಸೃಷ್ಟಿಸಿರುವ ಮತ್ತು ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ ಹಾಸನ ಇವರ ಮುಂದೆ ದಾಖಲು ಮಾಡಿದ್ದ ಮೇಲಿನ ಎಂವಿಸಿ ಸಂ.466/2008ರಲ್ಲಿ ಪ್ರಾ.ಸಾ.2 ಆಗಿ ಸಾಕ್ಷ್ಯ ಮಂಡಿಸಿ ಸಾಕ್ಷಿಕಟ್ಟೆಯಲ್ಲಿ ಸುಳ್ಳು ಸಾಕ್ಷ್ಯ ನುಡಿದಿರುವ ಪ್ರಕಾಶ್ ರಾಜ್ ವಿರುದ್ಧ ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕೆ ಪೊಲೀಸ್ ವರಿಷ್ಠಾಧಿಕಾರಿಗಳು ಹಾಸನ ಇವರಿಗೆ ನಿರ್ದೇಶಿಸಲಾಗಿದೆ ಆದ್ದರಿಂದ, ನಕಲಿ ಮತ್ತು ಸುಳ್ಳು ಸಾಕ್ಷ್ಯವನ್ನು ಸೃಷ್ಟಿಸಿರುವ ಹಾಗೂ ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನೀಡಿದ್ದಕ್ಕಾಗಿ ಸಹ ಆತನ ವಿರುದ್ಧ ಸಮುಚಿತ ವ್ಯವಹರಣೆಗಳನ್ನು ಪ್ರಾರಂಭಿಸತಕ್ಕದ್ದು. ಸಮುಚಿತ ವ್ಯವಹರಣೆಗಳನ್ನು ಪ್ರಾರಂಭಿಸಿದ ತರುವಾಯ, ಅದನ್ನು ಈ ದಿನಾಂಕದಿಂದ ಮೂರು ತಿಂಗಳೊಳಗೆ ಈ ನ್ಯಾಯಾಲಯಕ್ಕೆ ತಿಳಿಸತಕ್ಕದ್ದು.

9. ಈ ತೀರ್ಪಿನ ಒಂದು ಪ್ರತಿಯನ್ನು ನಿಶಾನೆ ಪಿ.8 ಹಾಗೂ ಪ್ರಾ.ಸಾ.2ರ ಸಾಕ್ಷ್ಯದ ಪ್ರಮಾಣೀಕರಿಸಿದ ಪ್ರತಿಗಳೊಂದಿಗೆ ಅದನ್ನು ಪೊಲೀಸ್ ವರಿಷ್ಠಾಧಿಕಾರಿಗಳು ಹಾಸನ ಇವರಿಗೆ ಗುರುತು ಮಾಡಲಾಗಿದ್ದು, ಅದನ್ನು ಈ ನ್ಯಾಯಾಲಯದ ನಿರ್ದೇಶನವನ್ನು ಪಾಲಿಸುವುದಕ್ಕೆ, ಈ ತೀರ್ಪಿನ ಪ್ರತಿಯೊಂದಿಗೆ, ಪೊಲೀಸ್ ವರಿಷ್ಠಾಧಿಕಾರಿಗಳು ಹಾಸನ ಇವರಿಗೆ ಕಳುಹಿಸತಕ್ಕದ್ದು.